# ಥೀಮ್ ಪಾರ್ಕ್‌ನಲ್ಲಿ ಜೋಡೆತ್ತಿನ ಗಾಡಿ

ಕಡಲತಡಿಯ ಭಾರ್ಗವ ಎಂದೇ ಖ್ಯಾತರಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮೇರು ಸಾಹಿತಿ ಕೋಟ ಶಿವರಾಮ ಕಾರಂತರ ನೆನಪುಗಳನ್ನು ಬಿಂಬಿಸುವ ಥೀಮ್ ಪಾರ್ಕ್ ಅವರ ಹುಟ್ಟೂರಾದ ಕೋಟದಲ್ಲಿದೆ. ಇತ್ತೀಚೆಗೆ ಇಲ್ಲಿ ಅನಾವರಣಗೊಂಡ ಜೋಡೆತ್ತಿನ ಗಾಡಿ ಜನರ ಮನ ಸೂರೆಗೊಳ್ಳುತ್ತಿದೆ. ಫೈಬರ್‌ನಿಂದ ಮಾಡಿದ ಈ ಎತ್ತುಗಳಿಗೆ ಮೂಗುದಾರ, ಕೊರಳಿಗೆ ಗಂಟೆ ಹಾಗೂ ಕೊಂಬುಗಳಿಗೆ ಅಲಂಕಾರ ಮಾಡಿರುವುದರಿಂದ ಇವು ಜೀವಂತ ಎತ್ತುಗಳಂತೆ ಕಾಣುತ್ತವೆ. ಈ ಪರಿಸರದಲ್ಲಿ ಎತ್ತಿನಗಾಡಿ ಸೇವೆಯಲ್ಲಿ ಖ್ಯಾತರಾದ ಕೂಸಣ್ಣ ಎಂಬ ವ್ಯಕ್ತಿಯ ಪ್ರತಿಕೃತಿಯನ್ನೇ ಗಾಡಿಯಲ್ಲಿ ಕೂರಿಸಲಾಗಿದ್ದು ಇದು ಅವರಿಗೆ ತೋರಿರುವ ಗೌರವವಾಗಿದೆ.

**- ಪಿ.ಜಯವಂತ ಪೈ, ಕುಂದಾಪುರ**





# ಗೆದ್ದಲಿನ ಗೂಡು

ರೈನೋಟರ್ಮಿಟಿಡೇ ವರ್ಗಕ್ಕೆ ಸೇರಿರುವಂತಹ ಗೆದ್ದಲು ಹುಳಗಳ ಗೂಡಿದು. ಇವು ಭೂಮಿಯ ಮೇಲ್ಮೈಯಿಂದ ಎರಡು ಅಡಿಗಳ ಕೆಳಗೆ ನೆಲಮಾಳಿಗೆಯಲ್ಲಿ ಈ ರೀತಿಯ ಚಿಕ್ಕ ಚಿಕ್ಕ ಗೂಡುಗಳಲ್ಲಿ ಸಮೂಹದೊಂದಿಗೆ ಬದುಕುತ್ತವೆ. ಸೌದೆ ಮತ್ತಿತರ ಮರದ ಸಾಮಗ್ರಿಗಳನ್ನು ತಿಂದುಹಾಕುವ ಗೆದ್ದಲಿನಲ್ಲಿ ಕೆಲಸಗಾರ ಗೆದ್ದಲುಗಳು ಮಾತ್ರ ನಮ್ಮ ಕಣ್ಣಿಗೆ ಗೋಚರಿಸುತ್ತವೆ. ರಾಣಿ ಹುಳವು ನೆಲಮಾಳಿಗೆಯ ಒಳ ಭಾಗದಲ್ಲಿರುತ್ತದೆ.

**- ಲಕ್ಷ್ಮಿದೇವಿ ಸಿ. ನಾವಡ, ಉಡುಪಿ**

# ಜಾಡಿಯ ಸೊಬಗು

ಹಿಂದೆ ಮನೆಯಲ್ಲಿ ತಯಾರಿಸಿದ ಉಪ್ಪಿನಕಾಯಿಯನ್ನು ಸಂಗ್ರಹಿಸಿ ಇಡಲು ನಮ್ಮ ಹಿರಿಯರು ಪಿಂಗಾಣಿಯ ದೊಡ್ಡ ದೊಡ್ಡ ಜಾಡಿಗಳನ್ನು ಬಳಸುತ್ತಿದ್ದರು. ಈಗ ಆಧುನಿಕತೆಯ ಭರಾಟೆಯಲ್ಲಿ ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಸಂಗ್ರಹಿಸಿಡುವ ಪರಿಪಾಠ ಬೆಳೆದು ಆ ಜಾಡಿಗಳು ಮೂಲೆಗುಂಪಾಗಿವೆ.

ಮೈಸೂರಿನ ಶ್ರೀಮತಿ ಗೋಪಿಕಾ ಅವರ ಮನೆಯಲ್ಲಿ ಅವರ ಸೊಸೆಯ ಕೈಚಳಕದಿಂದ ಸುಮಾರು ಎಂಬತ್ತು ವರ್ಷಗಳಷ್ಟು ಹಳೆಯದಾದ ಈ ಜಾಡಿಯು ಸುಂದರವಾಗಿ ಅಲಂಕರಿಸಿಕೊಂಡು ಅವರ ಮನೆಯ ಹಜಾರದ ಮೂಲೆಗೊಂದು ಸೊಬಗನ್ನು ತಂದಿದೆ.

**- ವಾರಿಜಾ ಜಗದೀಶ್, ಶಿವಮೊಗ್ಗ**

